ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ತಕ್ಷಣ ಹೇಳುವುದಕ್ಕಾಗುವುದಿಲ್ಲ. ಈಗತಾನೇ ಪ್ರಸ್ತಾಪ ಮಾಡಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ. ಅವರಿಗೆ ವಿಷಯ ತಿಳಿಸಿ ಹೇಳಿಕೆ ಕೊಡಿಸೋಣ.

(ಆ) ಬೆಳಗಾಂ ವಿಭಾಗದಲ್ಲಿ ಧರ್ಮದತ್ತಿ ಆಯುಕ್ತರಿಗೆ ಹಣ ಬಿಡುಗಡೆ ಮಾಡುತ್ತಿರುವುದರಿಂದ ಆಗುತ್ತಿರುವ ತೊಂದರೆ ಬಗ್ಗೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ): ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಸಚಿವರು ಇಲ್ಲ. ಆದರೂ ಕೂಡ ಹಿರಿಯ ಸಚಿವರು ಇದ್ದಾರೆ. ಇವತ್ತು ನಮ್ಮಲ್ಲಿ ಏನಾಗಿದೆ ಅಂದರೆ ಧರ್ಮದತ್ತಿ ಆಯುಕ್ತರಿಗೆ ನಮ್ಮ ಬೆಳಗಾಂ ವಿಭಾಗಕ್ಕೆ ಅಷ್ಟೇ ತೊಂದರೆ ಇರುವುದು. ಇಡೀ ರಾಜ್ಯದಲ್ಲಿ ಬೆಳಗಾಂ ವಿಭಾಗದಲ್ಲಿ ಧರ್ಮದತ್ತಿ ಆಯುಕ್ತರಿಗೆ ಹಣ ಬಿಡುಗಡೆ ಮಾಡುತ್ತೀರಿ. ಅದನ್ನು ತೆಗೆದುಕೊಳ್ಳುವುದರಲ್ಲಿ ತೊಂದರೆಯಾಗುತ್ತಿದೆ. ಸುಮಾರು ಐದಾರು ಏಳೆಂಟು ಹತ್ತು ವರ್ಷ ಹಣ ಹಾಗೆಯೇ ಇದ್ದು ಅದರ ಮೇಲೆ ಬಂದಂತಹ ಬಡ್ಡಿ 36 ಲಕ್ಷ ರೂಪಾಯಿಗಳನ್ನು ಹಂಚಿದ್ದಾರೆ. ದುಡ್ಡು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಆ ಬಡ್ಡಿ ಹಣವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇವತ್ತು ಏಕೆ ಹಣವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎನ್ನುವುದನ್ನು ನಾನು ತಮ್ಮ ಮುಂದೆ ಹೇಳುತ್ತೇನೆ. ಪಬ್ಲಿಕ್ ಟ್ರಸ್ಟ್ ಆಕ್ಟ್ ಎಂದಿದೆ ಅದು ತಮಗೂ ಗೊತ್ತು ಗೊತ್ತು. ಆ ಕಾಯಿದೆ ಪ್ರಕಾರ ಇಲ್ಲೊಂದು ಉದಾಹರಣೆ ಹೇಳುತ್ತೇನೆ. 20 ಸಾವಿರ ರೂಪಾಯಿ ಹಣವನ್ನು ಇಲ್ಲಿಂದ ಬಿಡುಗಡೆ ಮಾಡುತ್ತಾರೆ. ಅದನ್ನು ತೆಗೆದುಕೊಳ್ಳಬೇಕಾದರೆ ಏನೇನು ಮಾಡಬೇಕೆಂದರೆ, ಅಲ್ಲೊಂದು ಟ್ರಸ್ಟ್ ಮಾಡಿಕೊಳ್ಳಬೇಕು. ಹಾಗೆ ಟ್ರಸ್ಟ್ ಮಾಡಿಕೊಳ್ಳಬೇಕಾದರೆ ಮೂರು ತಿಂಗಳಾಗುತ್ತದೆ. ಬೆಳಗಾಂಗೆ ಅಡ್ಡಾಡಿ 20 ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುವುದರಲ್ಲಿ ಸುಮಾರು 10 ಸಾವಿರ ರೂಪಾಯಿಗಳು ಖರ್ಚಾಗುತ್ತದೆ. 10 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೂ ಅಲ್ಲಿ ಹತ್ತು ಪರ್ಸೆಂಟ್ ರೊಕ್ಕ ಕೊಡಬೇಕು. ಧರ್ಮದತ್ತಿ ಆಯುಕ್ತರ ಆಫೀಸಿನಲ್ಲಿ ದುಡ್ಡು ಇಲ್ಲದೆ ಹಣ ಬಿಡುಗಡೆ ಮಾಡುವುದಿಲ್ಲ. ಮತ್ತೆ ಅದಕ್ಕೆ ಏನೇನೋ ಕಂಡೀಷನ್ಸ್ ಹಾಕುತ್ತಾರೆ. ಇದು ಓಪನ್ ಸೀಕ್ರೆಟ್. ಹಾಗೆ ಹೇಳಿದರೆ ತಪ್ಪೇನೂ ಇಲ್ಲ. ಇವತ್ತು ಏನಾಗಿದೆ ಅಂದರೆ, ಒಂದು ಟ್ರಸ್ಟ್ ಮಾಡಿ ನೋಂದಾಯಿಸಲು ಅಂದಾಜು ಪತ್ರಿಕೆ ತಯಾರು ಮಾಡಬೇಕು. ಕಾಮಗಾರಿ ಮಾಡುವವರ ಆಸ್ತಿ ಬಗ್ಗೆ ಪಂಚಾಯಿತಿಯ ಉತಾರ ಕೊಡಬೇಕು. ಟ್ರಸ್ಟ್‌ನ ಛೇರ್ಮನ್ ಅಥವಾ ಅಧ್ಯಕ್ಷರು 15 ರೂಪಾಯಿ ಸ್ಟ್ಯಾಂಪ್ ಪೇಪರ್ ಮೇಲೆ ಬರೆದು ಕೊಡಬೇಕು. ಹಳೆಯ ಟ್ರಸ್ಟ್ ಕಮಿಟಿಯ ಠರಾವು ತರಬೇಕು. ಈ ರೀತಿಯ ಕಂಡೀಷನ್ಸ್ ಹಾಕಿ ಕಳುಹಿಸುತ್ತಾರೆ. ಈ ವರ್ಷ ಹೊಸದಾಗಿ ಹಲವು ಕಂಡೀಷನ್ಸ್ ಕೊಡಿಸಿದ್ದಾರೆ. ನಿಮ್ಮ ದೇವಾಲಯದ ಕಟ್ಟಡದ ಕಾಮಗಾರಿ ಅಂದಾಜು ವೆಚ್ಚದ ಒಟ್ಟು ಮೊತ್ತದಲ್ಲಿ ಅರ್ಧ ಹಣ ಅಥವಾ ಕಾಲು ಭಾಗ ಹಣವನ್ನು ಸಾರ್ವಜನಿಕ ವಂತಿಗೆಯಿಂದ ಸಂಗ್ರಹಿಸಬೇಕಾಗಿದೆ. ಕಾಮಗಾರಿ ಈಗಾಗಲೇ ಪ್ರಗತಿಯಲ್ಲಿದ್ದರೆ ಲೋಕೋಪಯೋಗಿ ಇಲಾಖೆಯಿಂದ ದಾಖಲೆಯನ್ನು ಪಡೆಯಬೇಕು.

ಅಧ್ಯಕ್ಷರು: ಫೈನಲ್ ಆಗಿ ಏನಾಗಬೇಕು ಅದನ್ನು ಹೇಳಿ.

ಶ್ರೀ ಎಸ್.ಎಸ್. ಪಾಟೀಲ್: ಇರತಕ್ಕ ತೊಂದರೆಗಳನ್ನು ಹೇಳುವುದರ ಜೊತೆಗೆ ಸುಮಾರು ಐದಾರು ವರ್ಷಗಳಿಂದ 8-10 ಕೋಟಿ ರೂಪಾಯಿಗಳನ್ನು ಪಡೆಯಲು ಬೆಳಗಾಂ ಡಿವಿಜನ್‌ನಲ್ಲಿ ತೊಂದರೆಯಿದೆ. ಉಳಿದ ಡಿವಿಜನ್‌ಗಳಲ್ಲಿ ಏನು ಮಾಡುತ್ತಾರೆಂದರೆ ಜಿಲ್ಲಾಧಿಕಾರಿಗಳಿಗೆ ಹಣವನ್ನು ಬಿಡುಗಡೆ ಮಾಡುತ್ತಾರೆ. ನಮ್ಮಲ್ಲಿ ಪಬ್ಲಿಕ್ ಟ್ರಸ್ಟ್ ಆಕ್ಟ್ ಇರುವುದರಿಂದ ಹಣವನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಐದಾರು ವರ್ಷಗಳಿಂದ ನಾವು ಕೇಳುತ್ತಿದ್ದೇವೆ. ನಮಗೆ ಕೊಡತಕ್ಕ ಹಣ ಏನಿದೆ ಅದನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿ. ಕಾಯಿದೆ ತಿದ್ದುಪಡಿ ಮಾಡುವುದು, ಅದೆಲ್ಲ ಬೇಕಾಗಿಲ್ಲ. ಧರ್ಮದತ್ತಿ ಆಯುಕ್ತರಿಗೆ ಬಿಡುಗಡೆ ಮಾಡುವುದು ಬೇಡ. ನೇರವಾಗಿ ಇಲ್ಲಿಂದ ಜಿಲ್ಲಾಧಿಕಾರಿಗಳಿಗೆ ಹಣವನ್ನು ಬಿಡುಗಡೆ ಮಾಡಿ. ಇಲ್ಲದಿದ್ದರೆ ತೊಂದರೆಯಾಗುತ್ತದೆ. ಅವರು ಏನು ಕೇಳುತ್ತಾರೆ, ಅದನ್ನೆಲ್ಲಾ ತಯಾರು ಮಾಡಿಕೊಂಡು ಕೊಡುವುದರಲ್ಲಿ ಹೊಸ ಸರ್ಕಾರ ಬಂದರೆ ಹಣ ಸಿಗುವುದಿಲ್ಲ. ಐದಾರು ವರ್ಷ ಕಷ್ಟಪಟ್ಟು 10-15 ಸಾವಿರ ರೂಪಾಯಿಗಳು ಖರ್ಚಾಗಿ ಹೊಸ ಸರ್ಕಾರ ಬಂದಾಗ ಆ ಹಣವನ್ನು ಮತ್ತೆ ತೆಗೆದುಕೊಳ್ಳುತ್ತಾರೆ. ಆ ಹಣವನ್ನು ತೀವ್ರವಾಗಿ ಅವರಿಗೆ ಕೊಡುವ ವ್ಯವಸ್ಥೆಯಾಗಬೇಕು. ಈಗ ಬರತಕ್ಕ ಹಣ ಏನಿದೆ ಅದನ್ನು ಉಳಿದ ವಿಭಾಗಗಳಲ್ಲಿ ಜಿಲ್ಲಾಧಿಕಾರಿಗಳಿಗೆ ಕೊಡುವ ರೀತಿಯಲ್ಲಿ ಬೆಳಗಾಂ ವಿಭಾಗದಲ್ಲೂ ಮಾಡಬೇಕು. ಇದರ ಬಗ್ಗೆ ಮುಜರಾಯಿ ಮಂತ್ರಿಗಳು ಉತ್ತರ ಕೊಡಬೇಕು.

ಅಧ್ಯಕ್ಷರು: ಮುಜರಾಯಿ ಮಂತ್ರಿಗಳು ನಾಳೆ ಉತ್ತರ ಕೊಡುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಸಮಸ್ಯೆಗಳು ಇರತಕ್ಕದ್ದು ನಿಜ. ಅದರಲ್ಲಿ ಏನೂ ಅನುಮಾನವಿಲ್ಲ ನಾನು ಒಪ್ಪಿಕೊಳ್ಳುತ್ತೇನೆ. ಸಮಸ್ಯೆಯನ್ನು ಮುಜರಾಯಿ ಸಚಿವರ ಗಮನಕ್ಕೆ ತಂದು ನಿಮಗೆ ಪರಿಹಾರ ಒದಗಿಸುವುದಕ್ಕೆ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಮಾಡಲಾಗುವುದು.

ಶ್ರೀ ಬಿ. ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ಮೂರು ದಿವಸಗಳಿಂದ ನಾನು ಸೂಚಿಸಿದ್ದ ವಿಷಯ ಬರುತ್ತಿದೆ. ನಿನ್ನೆ ಹಾಕಿದ್ದೀರಿ, ಇವತ್ತು ಫಿಕ್ಸ್ ಮಾಡಿದ್ದೀರಿ. ಈಗ ಮಂತ್ರಿಗಳೂ ಇದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ: ನಾವು ಬಜೆಟ್ ಮಾಡಬೇಕೆಂದು ಇದ್ದೇವೆ. ಈ ಸಮಯದಲ್ಲಿ ಉಳಿದ ವಿಚಾರಗಳನ್ನು ಮಾತನಾಡುತ್ತಾ ಹೋದರೆ, ಬೇರೆಯವರು ಮಾತನಾಡಲಿಕ್ಕೆ ಸಮಯ ಸಿಗುವುದಿಲ್ಲ. ಇಂತಹ ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಬಜೆಟ್ ಪಾಸ್ ಮಾಡುವಾಗ ಅವಕಾಶ ಕೊಡುವುದು ಸರಿಯೆ?

ಅಧ್ಯಕ್ಷರು: ಮಾನ್ಯ ಸೋಮಶೇಖರ್‌ರವರೆ, ನಾಳೆ ಮಧ್ಯಾಹ್ನ ತೆಗೆದುಕೊಳ್ಳೋಣ. ಬಜೆಟ್ ಮೇಲೆ ಮಾತನಾಡುವವರು ಬಹಳ ಜನರು ಇದ್ದಾರೆ. ಬಜೆಟ್ ಮೇಲೆ ಮಾತನಾಡುವವರು ನಾಳೆ ಮಾತನಾಡುವುದಕ್ಕೆ ಆಗುವುದಿಲ್ಲ. ನಿಮ್ಮ ವಿಚಾರವನ್ನು ನಾಳೆ ತೆಗೆದುಕೊಳ್ಳಬಹುದು.

ಶ್ರೀ ಬಿ. ಸೋಮಶೇಖರ್: ಮಧ್ಯದಲ್ಲಿ ಅರ್ಧಗಂಟೆ ಅವಕಾಶ ಕೊಡಿ. ಇದು ನನ್ನ ಒಬ್ಬನ ಪ್ರಶ್ನೆಯಲ್ಲ. ಇಡೀ ಸದನದ ಸದಸ್ಯರ ಗೌರವರದ ಪ್ರಶ್ನೆ. ಸದಸ್ಯರ ಮಾನ ಮರ್ಯಾದೆ ಪ್ರಶ್ನೆ.

ಅಧ್ಯಕ್ಷರು: ನಾಳೆ ಬೆಳಿಗ್ಗೆ 9 ಗಂಟೆಗೆ ಬಜೆಟ್ ಮೇಲೆ ಉತ್ತರ ಇದೆ. 2 ಗಂಟೆಯ ನಂತರ ಶೂನ್ಯ ವೇಳೆ, ಗಮನ ಸೆಳೆಯುವ ಸೂಚನೆ ಎಲ್ಲಾ ಇರುತ್ತದೆ. ಆಗ ತಾವು ಮುಂದುವರಿಸಿ.

ಶ್ರೀ ಬಿ. ಸೋಮಶೇಖರ್: ಬಜೆಟ್ ಮೇಲೆ ಉತ್ತರ ಕೊಡುವುದಕ್ಕೆ ಮುಂಚೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳುತ್ತಿದ್ದೇನೆ. ನಿನ್ನೆ ಮಂತ್ರಿಗಳು ಇರಲಿಲ್ಲ, ಇವತ್ತು ತೆಗೆದುಕೊಳ್ಳುವುದಕ್ಕೆ ತೊಂದರೆ ಏನು? ಮಾತನಾಡುವವರು ಮಾತನಾಡಲಿ. ಉತ್ತರ ಕೊಟ್ಟ ಮೇಲೆ ನಾವು ಹೇಳಿ ಪ್ರಯೋಜನವಾಗುವುದಿಲ್ಲ. ಇವತ್ತು ದಯವಿಟ್ಟು ನಮಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ನಿಮ್ಮದು ಬೇಕಾದರೆ ನಾಳೆ ತೆಗೆದುಕೊಳ್ಳಬಹುದು. ಮಾತನಾಡುವವರು ನಾಳೆ ಮಾತನಾಡುವುದಕ್ಕೆ ಆಗುವುದಿಲ್ಲ. ನಾನು ಖಂಡಿತಾ ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್: ಉತ್ತರ ಕೊಡುವುದಕ್ಕೆ ಮುಂಚೆ ಅವಕಾಶ ಕೊಡಿ.

ಅಧ್ಯಕ್ಷರು: ನಾಳೆ ರಿಪ್ಲೈಗೆ ಮೊದಲು ಯಾವುದೂ ಇಲ್ಲವೇ ಇಲ್ಲ. ನಾಳೆ 9 ಗಂಟೆಗೆ ರಿಪ್ಲೈ ಇದೆ. ಆಮೇಲೆ ಉಳಿದ ವಿಚಾರ. ಉತ್ತರ ಕೊಟ್ಟ ಮೇಲೆ ಪ್ರಶ್ನೋತ್ತರ ವೇಳೆ ಗಮನ ಸೆಳೆಯುವ ಸೂಚನೆ, ಶೂನ್ಯವೇಳೆ ಎಲ್ಲಾ ಬರುತ್ತದೆ. ಮಾತನಾಡತಕ್ಕ ಸದಸ್ಯರಿಗೆ ಅನುಕೂಲ ಮಾಡಿ ಕೊಡೋಣವೆಂಬ ಆಷ್ಟೆ. ಬೇರೇನೂ ಇಲ್ಲ.

ಶ್ರೀ ಬಿ. ಸೋಮಶೇಖರ್: ಉತ್ತರ ಆದಮೇಲೆ ತಕ್ಷಣ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು: ಆಗಬಹುದು, ತೆಗೆದುಕೊಳ್ಳುತ್ತೇನೆ.

6. ಗಮನ ಸೆಳೆಯುವ ಸೂಚನೆಗಳು

ವಿಷಯ:- (ಅ) ಆಶ್ರಯ, ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ವಸತಿ ಯೋಜನೆಯಡಿಯಲ್ಲಿನ ಫಲಾನುಭವಿಗಳ ವಸತಿ ನಿರ್ಮಾಣಕ್ಕೆ ಆಗುತ್ತಿರುವ ತೊಂದರೆಗಳ ಬಗ್ಗೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಸಭಾಧ್ಯಕ್ಷರೇ, ರಾಜ್ಯದಲ್ಲಿ ಆಶ್ರಯ ಅಂಬೇಡ್ಕರ್ ಹಾಗೂ ಇಂದಿರಾ ಆವಾಸ್ ವಸತಿ ಯೋಜನೆ ಅಡಿಯಲ್ಲಿ ಅರ್ಹ ಫಲಾನುಭವಿಗಳಿಗೆ ವಸತಿ ನಿರ್ಮಾಣಕ್ಕೆ ಮಂಜೂರಾತಿ ನೀಡಿದಾಗ ಅಂತಹ ಫಲಾನುಭವಿಗಳು ತಮಗೆ ಸೇರಿದ ಹಿಡುವಳಿ ಕಂದಾಯ ಜಮೀನಿನಲ್ಲಿ ಮನೆಗಳನ್ನು ನಿರ್ಮಾಣ ಮಾಡಲು ಅನುಸರಿಸಬೇಕಾಗುತ್ತಿರುವ ಕಾನೂನು ಕ್ರಮಗಳಿಂದ ಉಂಟಾಗುತ್ತಿರುವ ತೊಂದರೆ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.